2ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ನಗರ
ಸಿ.ಸಿ.ನಂಃ 29515 ಃ2023

| | | | |
|---|---|---|---|
| ಸಾಕ್ಷಿದಾರರ ಹೆಸರು | ಅನಂತ ಕುಮಾರ ವಿ | ಸಿ ಡಬ್ಲ್ಯು | 1 |
| ತಂದೆಯ ಹೆಸರು | ವೆಂಕಟೇಶ್ | ಪಿ ಡಬ್ಲ್ಯು | 1 |
| ವಯಸ್ಸು | 40 ವರ್ಷ | | |
| ಉದ್ಯೋಗ | ನಿರ್ವಾಹಕ | | |
| ವಾಸಸ್ಥಾನ | ಮಾಚೋಹಳ್ಳಿ, ಬೆಂಗಳೂರು | | |

ಪ್ರಮಾಣ ವಚನ ಬೋಧಿಸಿದ ದಿನಾಂಕ ಃ 03.06.2025.

ಮುಖ್ಯ ವಿಚಾರಣೆ ಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ-

ನಾನು 2021 ರಿಂದ 2024 ರವರೆಗೆ ಕೊತ್ತನೂರು ಬಿ.ಎಂ.ಟಿ.ಸಿ ಯಲ್ಲಿ ನಿರ್ವಾಹಕನಾಗಿ ಚಾಸಾ 2 ರವರು ಚಾಲಕನಾಗಿ ಕೆಲಸ ಮಾಡಿರುತ್ತೇವೆ. ನಮ್ಮ ಡಿಪೋ ಸಂಖ್ಯೆ 34 ಆಗಿರುತ್ತದೆ. ದಿಃ 14.11.2022 ರಂದು ರೂಟ್ ನಂ 366 ಜೆಡ್ /9 ಬಸ್ ಸಂಖ್ಯೆ ಕೆ ಎ 57 ಎಫ್ 51 ರಲ್ಲಿ ಆನೇಕಲ್ಲು ರಿಂದ ಕೆ.ಆರ್ ಮಾರ್ಕೇಟ್ ಗೆ ರಹದಾರಿಯಲ್ಲಿ ನಾನು ನಿರ್ವಾಹಕ ಹಾಗೂ ಚಾಸಾ 2 ರವರು ಚಾಲಕನಾಗಿದ್ದನು. ದಿಃ 15.11.2022 ರಂದು ಬೆಳಿಗ್ಗೆ 11.30 ಗಂಟೆಗೆ ಜಯದೇವ ಹತ್ತಿರ ಆಶ್ರಮ ಬಸ್ ನಿಲ್ದಾಣ ಇದ್ದು, ಅಲ್ಲಿ ಆರೋಪಿತರು ವಾಹನವನ್ನು ಹತ್ತಿ ಟಿಕೆಟ್ ಪಡೆದುಕೊಂಡು ವಾಹನದ ಬಾಗಿಲಲ್ಲಿ ನಿಂತುಕೊಂಡಿದ್ದರು. ಅವರಿಗೆ ನಾನು ಜನ ಬಹಳ ಇರುತ್ತಾರೆ ಒಳಗೆ ಬನ್ನಿ ಎಂದು ಹೇಳಿದೆ ಮತ್ತು ಬಸ್ ಸಹ ಖಾಲಿ ಇತ್ತು. ಮುಂದೆ ಡೈರಿ ಸರ್ಕಲ್ ಹತ್ತಿರ ಸಹ ಆರೋಪಿತರು ಬಸ್ಸಿನ ಒಳಗೆ ಬಂದಿರುವುದಿಲ್ಲ ಮತ್ತು ನಿಮಾನ್ಸ್ ಹತ್ತಿರವು ಸಹ ಆರೋಪಿತರಿಗೆ ಒಳಗೆ ಬರಲು ತಿಳಿಸಿದಾಗ ಆರೋಪಿಯು ನನಗೆ ಹೋಗೋ ಲೌಡಿ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ. ಆರೋಪಿಯು ಮುಂದುವರೆದು ನಿನ್ನಮ್ಮನ್ ಗಾಂಡು ಎಂದು ಬೈದಿರುತ್ತಾನೆ. ಚಾಸಾ 2 ರವರಿಗೆ ಪೊಲೀಸ್ ಠಾಣೆಗೆ ಹೋಗೋಣ ಎಂದು ತಿಳಿಸಿದೆ. ಆಗ ಆರೋಪಿತರು ಚಾಲಕನ ಬಳಿ ಬಂದು ಬಸ್ಸಿನ ಬಾಗಿಲನ್ನು ತೆಗೆಯಿರಿ ನಾವು ಇಳಿಯುತ್ತೇವೆ ಎಂದು ಹೇಳಿದರು. ಆರೋಪಿತರು ಮುಂದುವರೆದು ಬಸ್ಸಿನಲ್ಲಿ ಇದ್ದ ಫೈಯರ್ ಇಂಜಿನ್ ತೆಗೆದುಕೊಂಡು ಚಾಸಾ 2 ರವರಿಗೆ ಬೆನ್ನಿಗೆ ಮತ್ತು ಭುಜಕ್ಕೆ ಹಲ್ಲೆ ಮಾಡಿದರು. ಚಾಸಾ 2 ರವರಿಗೂ ಸಹ ಅವಾಚ್ಯ

ಶಬ್ದಗಳಿಂದ ಬೈದಿರುತ್ತಾರೆ. ನಂತರ ಆರೋಪಿತರು ಬಸ್ಸಿನಿಂದ ಕೆಳಗೆ ಇಳಿದು ಕಲ್ಲಿನಿಂದ ಬಸ್ಸಿನ ಗಾಜನ್ನು ಹೊಡೆರದಿರುತ್ತಾರೆ. ನಂತರ ಸಾರ್ವಜನಿಕರ ಸಹಾಯದಿಂದ ಆರೋಪಿತರನ್ನು ಬಸ್ಸಿ ಒಳಗೆ ಹಾಕಿಕುಂಡು ವಿಲ್ಸನ್ ಗಾರ್ಡನ್ ಪೊಲೀಸ್ ಠಾಣೆಗೆ ಕರೆದುಕೊಂಡು ಹೋದೆವು ಅಲ್ಲಿಂದ ಸಿದ್ದಾಪುರ ಪೊಲೀಸ್ ಠಾಣಗೆ ಹೋಗಲು ತಿಳಿಸಿದರು. ಚಾಸಾ 2 ರವರು ಸಂಜಯ್ ಗಾಂಧಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ. ಆರೋಪಿತರು ನನಗೆ ಪ್ರಾಣ ಬೆದರಿಕೆ ಹಾಕಿರುತ್ತಾರೆ ಇದರಿಂದ ನನ್ನ ಕರ್ತವ್ಯಕ್ಕೆ ಅಡ್ಡಿ ಉಂಟಾಗಿರುತ್ತದೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಹಾಗೂ ಅದರಲ್ಲಿ ಇರುವ ನನ್ನ ಸಹಿಯನ್ನು ನಿಪಿ-1ಎ ಎಂದು ಗುರ್ತಿಸಿದ್ದೇನೆ. ನಾನು ದೂರು ನೀಡಿದ ನಂತರ ಪೊಲೀಸರು ಸ್ಥಳಕ್ಕೆ ಬಂದು 3.45 ರಿಂದ 4.30 ವರೆಗೆ ಚಾಸಾ 4 ಮತ್ತ 5 ರವರ ಸಮಕ್ಷಮ ಪಂಚನಾಮೆ ಮಾಡಿದರು. ಅದರಲ್ಲಿ ಪೊಲೀಸರು ನನ್ನ ಸಹಿ ಪಡೆದುಕೊಂಡರು ಅದನ್ನು ನೋಡಿ ಗುರ್ತಿಸುತ್ತಿದ್ದೇನೆ. ಅದನ್ನು ನಿಪಿ-2 ಹಾಗೂ ಅದರಲ್ಲಿ ಇರುವ ನನ್ನ ಸಹಿಯನ್ನು ನಿಪಿ-2ಎ ಎಂದು ಗುರ್ತಿಸಿದ್ದೇನೆ. ಸಾಕ್ಷಿಯು 4 ಟಿಕೆಟ್ ಗಳನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 3 ಎಂದು ಗುರುತಿಸಲಾಯಿತು. ಸಾಕ್ಷಿಯು ಫೈಯರ್ ಇಂಜಿನ್ ಅನ್ನು ನೋಡಿ ಗುರುತಿಸಿದ್ದು ಅದನ್ನು ಎಮ್.ಒ 01 ಎಂದು ಗುರುತಿಸಲಾಯಿತು. ಸಾಕ್ಷಿಯು ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಯು ಅಭಿಯೋಜನೆಗೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿದ್ದಾರೆ ಎಂದು ಹಿರಿಯ ಸ.ಸ.ಅ ರವರು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಕೋರಿದ್ದು ಅವರಿಗೆ ಅನುಮತಿ ನೀಡಲಾಯಿತು.

ಆರೋಪಿತರು ಚಾಸಾ 2 ರವರಿಗೆ ಕೈಗಳಿಂದ ಹಲ್ಲೆಯನ್ನು ಮಾಡಿದ್ದಾರೆ ಎಂದರೆ ಸರಿ.

ಪಾಟೀ ಸವಾಲಿಗಾಗಿ ಮಧ್ಯಾಹ್ನ ಕ್ಕೆ ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇದೆ

(ಸಾಹೀಲ್ ಅಹ್ಮದ್ ಎಸ್ ಕುನ್ನಿಭಾವಿ)
2ನೇ ಅ ಮು ಮ ದಂ.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್.ಬಿ ವಕೀಲರಿಂದಃ ಮಧ್ಯಾಹ್ನ 3.00 ಗಂಟೆಗೆ

ನಾನು 23 ವರ್ಷದಿಂದ ಕಂಡಕ್ಟರ್ ಆಗಿ ಕೆಲಸ ಮಾಡುತ್ತಿದ್ದೇನೆ. ನಮಗೆ ಒಂದು ಬ್ಯಾಡ್ಜ್ ಕೊಟ್ಟಿರುತ್ತಾರೆ ಅದನ್ನು ಈ ದಿವಸ ನ್ಯಾಯಾಲಯಕ್ಕೆ ಹಾಕಿಕೊಂಡು ಬಂದಿಲ್ಲ ಎಂದರೆ ಸರಿ. ನಾನು ನೀಡಿದ ದೂರನ್ನು ಪೊಲೀಸರು ಠಾಣೆಯಲ್ಲಿ ನಾನು ಹೇಳಿದ ರೀತಿಯಲ್ಲಿ ಬೆರಳಚ್ಚು ಮಾಡಿರುತ್ತಾರೆ. ನಾನು ಓದಿದ ನಂತರ ಸಹಿ ಮಾಡಿರುತ್ತೇನೆ. ನನ್ನ ಪಿರ್ಯಾದಿಯಲ್ಲಿ ನಾನು ಅದರಲ್ಲಿ ಒಬ್ಬ ಕಲ್ಲಿನಿಂದ ಗ್ಲಾಸನ್ನು ಹೊಡೆದಿರುತ್ತಾನೆ ಎಂದು ಹೇಳಿದ್ದು ನಿಖರವಾಗಿ ಆರೋಪಿಯ ಹೆಸರನ್ನು ಪಿರ್ಯಾದಿಯಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ದಿಃ 14.11.2022 ರಂದು ನಾವು ಬಸ್ಸನ್ನು ತೆಗೆದುಕೊಂಡು ಹೋಗಿದ್ದು ಅದನ್ನು ಮಾರನೇ ದಿವಸ ನಾವು ಡಿಪೋ ಗೆ ಬಿಡಬೇಕಾಗಿತ್ತು ಎಂದರೆ ಸರಿ. ನಮ್ಮ ಬಸ್ಸಿನ ಚಾಲಕನ ಮುಂದೆ ಒಂದು ಕನ್ನಡಿ ಇತ್ತು ಎಂದರೆ ಸರಿ. ಬಸ್ಸುಗಳಲ್ಲಿ ಈಗ ಸಿ ಸಿ ಟಿವಿ ಕ್ಯಾಮೇರಾವನ್ನು ಅಳವಡಿಸಿದ್ದಾರೆ ಎಂದರೆ ಸರಿ. ಬಸ್ಸಿನಲ್ಲಿ ಸಿ ಸಿ ಟಿವಿ ಇತ್ತು ಎಂದರೆ ಸರಿ. ಬಸ್ಸಿನಲ್ಲಿರುವ ಕನ್ನಡಿಯಿಂದ ಚಾಲಕನಿಗೆ ಯಾರು ಬರುತ್ತಾರೆ ಹಾಗೂ ಯಾರೂ ಹೋಗುತ್ತಾರೆ ಎಂಬುದು ಕಾಣುತ್ತದೆ ಎಂದರೆ ಸರಿ. ಸಿಲಿಂಡರ್ ಎಮ್.ಓ.01 ಬಸ್ಸಿನ ನಿರ್ವಾಹಕರ ಬಳಿ ಹಿಂದೆ ತೂಗು ಹಾಕಿರುತ್ತಾರೆ ಎಂದರೆ ಸರಿ. ಎಮ್.ಓ.01 ಎಷ್ಟು ತೂಕದ್ದು ಎಂದು ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ಎಮ್.ಓ.01 ಅನ್ನು ಎತ್ತಲು ಆಗುವುದಿಲ್ಲ ಎಂದರೆ ಸರಿ. ಬಸ್ಸಿಗೆ ಮುಂದೆ ಮತ್ತು ಹಿಂದೆ ಎರಡು ಬಾಗಿಲುಗಳು ಇವೆ ಎಂದರೆ ಸರಿ. ನಾನು ಮತ್ತು ಚಾಸಾ 2 ರವರು ಮೊಬೈಲ್ ಅನ್ನು ಉಪಯೋಗಿಸುತ್ತಿದ್ದೇವೆ ಎಂದರೆ ಸರಿ. ಬಸ್ ನಲ್ಲಿ ಏನಾದರೂ ಡ್ಯಾಮೇಜ್ ಆದರೆ ನಾವು ಅಧಿಕಾರಿಗಳಿಗೆ ತಿಳಿಸುತ್ತೇವೆ ಎಂದರೆ ಸರಿ. ಬಸ್ ಡ್ಯಾಮೇಜ್ ಆದರೆ ಅಧಿಕಾರಿಯವರು ನೋಟೀಸ್ ಕೊಡುತ್ತಾರೆ ಎಂದರೆ ಸರಿ, ನಮಗೆ ನೋಟೀಸ್ ಬಂದಿರುವುದಿಲ್ಲ. ಬಸ್ಸಿಗೆ ಯಾವುದೇ ರುಕ್ಸಾನ ಆಗದೇ ಇದ್ದುದರಿಂದ ನಮಗೆ ನೋಟೀಸ್ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಿನದಂದು ಬಸ್ಸಿನಲ್ಲಿ ಸುಮಾರು 40-45 ಜನ ಪ್ರಯಾಣಿಕರು ಇದ್ದರು. ಬಸ್ಸಿನಲ್ಲಿ 45 ಸೀಟುಗಳು ಇವೆ. ಎಲ್ಲಾ ಪ್ರಯಾಣಿಕರು ಬಸ್ ನ ಸೀಟಿನಲ್ಲಿ ಕುಳಿತಿದ್ದರು. ಆರೋಪಿತರು ಆ ದಿನ ಬಸ್ಸಿನಲ್ಲಿ ಪ್ರಯಾಣ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಬಸ್ಸಿನ ಟಿಕೆಟ್ ಗಳು ನಮ್ಮ ಬಳಿಯೇ ಇರುತ್ತವೆ ಎಂದರೆ ಸರಿ. ಪಿರ್ಯಾದಿ ಕೊಟ್ಟ ನಂತರ ನಾನು ಟ್ರಿಪ್ ಶೀಟ್ ಅನ್ನು ಬರೆದಿರುತ್ತೇನೆ. ಟ್ರಿಪ್ ಶೀಟ್ ನಲ್ಲಿ ಮೂರು ಜನರು ಬಸ್ಸಿನ ಬಾಗಿಲಲ್ಲಿ ನಿಂತಿದ್ದರು

ಎಂದು ನಮೂದು ಮಾಡಿರುತ್ತೇನೆ ಎಂದರೆ ಸರಿ ಆದರೆ ದೂರನ್ನು ಇಬ್ಬರ ಆರೋಪಿತರ ವಿರುದ್ಧ ದೂರು ನೀಡಿರುತ್ತೇನೆ. ನನ್ನ ಟ್ರಿಪ್ ಶೀಟ್‌ನಲ್ಲಿ ಸಿಲಿಂಡರ್ ಬಗ್ಗೆ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನನ್ನ ಟ್ರಿಪ್ ಶೀಟ್ ನಲ್ಲಿ ಚಾಸಾ 2 ಚಾಲಕನ ಒಂದು ಚೈನ್ ಕಳೆದು ಹೋದ ಬಗ್ಗೆ ನಮೂದು ಮಾಡಿದ್ದೇನೆ ಎಂದರೆ ಸರಿ ಆದರೆ ಚಾಸಾ 1 ರವರು ಸ್ವ ಇಚ್ಛೆಯಿಂದ ಚಾಸಾ 2 ರವರು ಸದರಿ ಚೈನ್ ಬಗ್ಗೆ ತಿಳಿಸಿದ್ದು ಅದರಂತೆ ನಾನು ಬರೆದಿರುತ್ತೇನೆ ಎಂದು ನುಡಿಯುತ್ತಾರೆ ಆದರೆ ಚಾಸಾ 1 ರವರು ಚೈನನ್ನು ಸದರಿ ದಿನದಂದು ಹಾಕಿಕೊಂಡಿರುವುದನ್ನು ನೋಡಿದ್ದು ಇರುವುದಿಲ್ಲ. ಆರೋಪಿತರು ಕಲ್ಲಿನಿಂದ ಗ್ಲಾಸನ್ನು ನೇರವಾಗಿ ಚಾಲಕನ ಎದುರುಗಡೆ ಹೊಡೆರುತ್ತಾರೆ. ಆರೋಪಿತರು ಕಲ್ಲಿನಿಂದ ಹೊಡೆದಿಲ್ಲ ಎಂದರೆ ಸರಿಯಲ್ಲ. ಸದರಿ ಕಲ್ಲನ್ನು ಪೊಲೀಸರು ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿ.

ದಿಃ 14.11.2022 ರಂದು ರೂಟ್ ನಂ 366 ಜೆಡ್ /9 ಬಸ್ ಸಂಖ್ಯೆ ಕೆ ಎ 57 ಎಫ್ 51 ರಲ್ಲಿ ಆನೇಕಲ್ಲು ರಿಂದ ಕೆ.ಆರ್ ಮಾರ್ಕೇಟ್ ಗೆ ರಹದಾರಿಯಲ್ಲಿ ನಾನು ನಿರ್ವಾಹಕ ಹಾಗೂ ಚಾಸಾ 2 ರವರು ಚಾಲಕನಾಗಿದ್ದನು. ದಿಃ 15.11.2022 ರಂದು ಬೆಳಿಗ್ಗೆ 11.30 ಗಂಟೆಗೆ ಜಯದೇವ ಹತ್ತಿರ ಆಶ್ರಮ ಬಸ್ ನಿಲ್ದಾಣ ಇದ್ದು, ಅಲ್ಲಿ ಆರೋಪಿತರು ವಾಹನವನ್ನು ಹತ್ತಿ ಟಿಕೆಟ್ ಪಡೆದುಕೊಂಡು ವಾಹನದ ಬಾಗಿಲಲ್ಲಿ ನಿಂತುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪತರಿಗೆ ಬಸ್ಸಿನಲ್ಲಿ ಬಹಳ ಜನ ಇರುತ್ತಾರೆ ಒಳಗೆ ಬನ್ನಿ ಎಂದು ಹೇಚಿರುವುದಿಲ್ಲ ಎಂದರೆ ಸರಿಯಲ್ಲ. ಮುಂದೆ ಡೈರಿ ಸರ್ಕಲ್ ಹತ್ತಿರ ಸಹ ಆರೋಪಿತರು ಬಸ್ಸಿನ ಒಳಗೆ ಬಂದಿರುವುದಿಲ್ಲ ಮತ್ತು ನಿಮಾನ್ಸ್ ಹತ್ತಿರವು ಸಹ ಆರೋಪಿತರಿಗೆ ಒಳಗೆ ಬರಲು ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನನಗೆ ಹೋಗೋ ಲೌಡಿ ಎಂದು ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಹಾಗೂ ನಿನ್ನಮ್ಮನ್ ಗಾಂಡು ಎಂದು ಬೈದಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಮುಂದುವರೆದು ಬಸ್ಸಿನಲ್ಲಿ ಇದ್ದ ಫೈಯರ್ ಇಂಜಿನ್ ತೆಗೆದುಕೊಂಡು ಚಾಸಾ 2 ರವರಿಗೆ ಬೆನ್ನಿಗೆ ಮತ್ತು ಭುಜಕ್ಕೆ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ 2 ರವರಿಗೂ ಸಹ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಎಂದರೆ ಸರಿಯಲ್ಲ. ನಂತರ ಆರೋಪಿತರು ಬಸ್ಸಿನಿಂದ ಕೆಳಗೆ ಇಳಿದು ಕಲ್ಲಿನಿಂದ ಬಸ್ಸಿನ ಗಾಜನ್ನು ಹೊಡೆದಿರುವುದಿಲ್ಲ ಎಂದರೆ ಸರಿಯಲ್ಲ.

ಚಾಸಾ 2 ರವರು ಸಂಜಯ್ ಗಾಂಧಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನಿಮಗೆ ಪ್ರಾಣ ಬೆದರಿಕೆ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ಇದರಿಂದ ನನ್ನ ಕರ್ತವ್ಯಕ್ಕೆ ಅಡ್ಡಿ ಉಂಟಾಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪು ಮಾಡದಿದ್ದರೂ ಸಹ ಅವರುಗಳ ವಿರುದ್ದ ಸುಳ್ಳು ನೀಡಿರುತ್ತೇನೆ ಎಂದರೆ ಸರಿಯಲ್ಲ. ಪೊಲೀಸರು ಸ್ಥಳಕ್ಕೆ ಬಂದು ಯಾವುದೇ ಪಂಚನಾಮೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರಿಗೆ ಸಹಾಯಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

( ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇದೆ

(ಸಾಹೀಲ್ ಅಹ್ಮದ್ ಎಸ್ ಕುನ್ನಿಭಾವಿ)
2ನೇ ಅ ಮು ಮ ದಂ.